ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೆ, ನಾನು ಇಷ್ಟೇ ಹೇಳುತ್ತೇನೆ. ಮಾನ್ಯ ಸದಸ್ಯರು ಈಗ ಸರ್ಕಾರದ ಗಮನಕ್ಕೆ ಒಂದು ಗಂಭೀರವಾದ ವಿಚಾರವನ್ನು ತಂದಿದ್ದಾರೆ. ಅದರ ಬಗ್ಗೆ ಆದಷ್ಟು ಶೀಘ್ರವಾಗಿ, ಅತ್ಯಂತ ತ್ವರಿತವಾಗಿ ಸರ್ಕಾರ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಈ ಬಗ್ಗೆ ಸರಿಯಾದಂಥ ಪುನರ್‌ಪರಿಶೀಲನೆಯಾಗಂ ವರೆಗೂ ಫೆನ್ನಿಯನ್ನು ಮಾರಾಟ ಮಾಡಬಾರದು.

ಶ್ರೀ ವಿ. ಎಸ್. ಆಚಾರ್ಯ.—ನಾನು ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ, ತಾರೀಖು ೨೭-೩-೧೯೮೩ರ ಉದಯವಾಣಿ ಪತ್ರಿಕೆಯಲ್ಲಿ ಈ ರೀತಿ ಬಂದಿದೆ ;

"ಕರ್ನಾಟಕ ರಾಜ್ಯದಲ್ಲಿ ಫೆನ್ನಿ ತಯಾರಿಸುವ ಡಿಸ್ಟಿಲರಿ ಕಾಪುವಿನ ದುರ್ಗಾ ಡಿಸ್ಟಲರಿ ಒಂದೇ ಆಗಿರುತ್ತದೆ. ಈ ಡಿಸ್ಟಿಲರಿಯ ಫೆನ್ನಿ ತಯಾರಿಕೆಯ ಎಲ್ಲ ಕಾರ್ಯಗಳು ಸರಕಾರದ ಅಬಕಾರಿ ಇಲಾಖೆಯಿಂದಲೇ ನೇಮಿಸಲ್ಪಟ್ಟ ಒಬ್ಬ ಇನ್‌ಸ್ಪೆಕ್ಟರ್ ಮತ್ತು ಅವರ ಸಿಬ್ಬಂದಿಗಳ ಮೇಲ್ವಿಚಾರಣೆಯಲ್ಲಿ ನಡೆಸಲ್ಪಡುತ್ತವೆ."

He denies the Chemical Examiner's report. I am not telling about the Government. The Proprietor of the factory is denying the report and is denying the whole thing. The presence of Mythyl Alcohol is there

ಎಂದು ಕೆಮಿಕಲ್ ಎಕ್ಸಾಮಿನರ್ ರಿಪೋರ್ಟ್‌ನಲ್ಲಿದೆ. ಈ ಫೈಲನ್ನು ಮಾನ್ಯ ಮಂತ್ರಿಗಳಿಗೆ ಕೊಟ್ಟುಬಿಡುತ್ತೇನೆ. ಇದರ ಬಗ್ಗೆ ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕು. ಇದು ಗಮನಕ್ಕೆ ಬಂದಿರತಕ್ಕಂಥಾದ್ದು. ಗಮನಕ್ಕೆ ಬಾರದೆ ಏಷ್ಟು ಆಗಿದೆಯೋ ಗೊತ್ತಿಲ್ಲ. ಅಮಾಯಕರ ಪ್ರಾಣ ರಕ್ಷಣೆಯ ಜವಾಬ್ದಾರಿ ಇರುವುದರಿಂದ ಸರ್ಕಾರ ಇದರ ಬಗ್ಗೆ ಸ್ವಲ್ಪ ಉಸ್ತುವಾರಿಯನ್ನು ಬಿಗಿಗೊಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಎಸ್. ಎಸ್. ಕೃಷ್ಣನ್.—ಹಿಂದೆ ಭಾರಿ ದೊಡ್ಡ ದುರಂತ ಬೆಂಗಳೂರಿನಲ್ಲಿ ನಡೆದಿರುವುದು ವರದಿಯಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಕೂಡ ತಕ್ಷಣ ಗಮನಹರಿಸಬೇಕು.

ಗಮನ ಸೆಳೆಯುವ ಸೂಚನೆ

ವಿಷಯ.—(೧) ನಂಜನಗೂಡು ತಾಲ್ಲೂಕಿನಲ್ಲಿ ಕಾಡು ಆನೆಗಳಿಂದ ಬೆಳೆಗಳ ಹಾನಿ ಹಾಗೂ ಪ್ರಾಣ ಹಾನಿಗಳು ಆಗಿರುವ ಬಗ್ಗೆ.

ಶ್ರೀ ಎಂ. ಮಹಾದೇವ (ನಂಜನಗೂಡು) —ಮಾನ್ಯ ಉಪಾಧ್ಯಕ್ಷರೆ, ನಂಜನಗೂಡು ತಾಲ್ಲೂಕಿನಲ್ಲಿ ಕಾಡು ಆನೆಗಳ ಹಾವಳಿಯಿಂದಾಗಿ ಬೆಳೆಗಳ ಹಾನಿ ಹಾಗೂ ಪ್ರಾಣ ಹಾನಿಗಳು ಆಗಿರುವ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ಇಲಾಖೆಯ ರಾಜ್ಯ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೆ, ನಾನು ಈ ಕೆಳಗಿನ ನನ್ನ ಹೇಳಿಕೆಯನ್ನು ಮಾಡಬಯಸುತ್ತೇನೆ.

ನಂಜನಗೂಡು ತಾಲ್ಲೂಕು ನಾಗನಾಪುರ, ಅಂಚೆ ಪುರ, ದೇವೇಗೌಡನಪುರ, ಹೊಸಬೀಡು, ಹೆಡಿಯಾಲ ಮತ್ತು ಸುತ್ತಮುತ್ತಲು ಗ್ರಾಮಗಳಲ್ಲಿ ಕಾಡು ಆನೆಗಳ ಹಾವಳಿಯಿಂದಾಗಿ ಬೆಳೆಗಳ ಹಾನಿ ಹಾಗೂ ಪ್ರಾಣ ಹಾನಿಗಳು ಆಗಿರುವುದು ನಿಜ. ಇಂಥ ಹಾನಿಗಳನ್ನು ತಡೆಗಟ್ಟಲು ಸರ್ಕಾರದವರು ಕೆಳಗಿನ ಕ್ರಮಗಳನ್ನು ಕೈಗೊಂಡಿದ್ದಾರೆ.—

(೧) ಮೈಸೂರು ಜಿಲ್ಲೆಯ ಸರಗೂರು ಮತ್ತು ಇತರ ಅರಣ್ಯ ವಲಯಗಳಲ್ಲಿ ಕಾಡು ಆನೆಗಳನ್ನು ಹೆದರಿಸಿ ಓಡಿಸಲು ವಿಶೇಷ ಸಿಬ್ಬಂದಿಗಳನ್ನು ನೇಮಿಸಲಾಗಿದೆ.

(೨) ಪಂಚಾಯಿತಿಗಳಿಗೆ ಪುಕ್ಕಟೆಯಾಗಿ ಸಿಡಿ-ಮದ್ದುಗಳನ್ನು ಪೂರೈಸಲಾಗುತ್ತಿದೆ

(ಸಿ) ಮೇಲಿಂದ ಮೇಲೆ ಬಡಾನೆಗಳ ಹಾವಳಿಗಳಿಗೆ ಈಡಾಗುತ್ತಿರುವ ಹಳ್ಳಿಗಳ ಸುತ್ತಲೂ ಶಾಶ್ವತೋಪಿಕವಾಗಿ ಕಂದಕಗಳನ್ನು ತೋಡುವ ಕಾರ್ಯವನ್ನು ಪೆಗ್ಗಡದೇವನ ಕೋಟೆಯಂ ಬಳಿ ಈ ವರ್ಷ ಕೈಕೊಳ್ಳಲಾಗಿದೆ. ಈ ಕಾರ್ಯಕ್ರಮವು ಯಶಸ್ವಿಯಾಗಿ ಕಂಡು ಬಂದರೆ, ಅದನ್ನು ಇತರ ಹಳ್ಳಿಗಳಿಗೂ ಕ್ರಮೇಣ ವಿಸ್ತರಿಸಲಾಗುವುದು.

(ಳ) ಹಾನಿಯಾದ ಬೆಳೆಗಳಿಗೆ ಸಂಪೂರ್ಣ ಪರಿಹಾರವನ್ನು ಸರ್ಕಾರದವರು ಕೊಡುತ್ತಿದ್ದಾರೆ. ಇದಲ್ಲದೇ ಪ್ರಾಣಹಾನಿಯಾದಲ್ಲಿ ಪ್ರತಿಯೊಂದು ಪ್ರಕರಣದಲ್ಲಿ ಮೊದಲು ೨,೦೦೦ ರೂ. ಕೊಡುತ್ತಿದ್ದು, ಈಗ ತಲಾ ೫,೦೦೦ ರೂಪಾಯಿಗಳನ್ನು ಕೊಡಲಾಗುತ್ತಿದೆ.

ಶ್ರೀ ಎಂ. ಮಹಾದೇವ.—ಮಾನ್ಯ ಉಪಾಧ್ಯಕ್ಷರೆ, ಕಾಡು ಆನೆಗಳ ಹಾವಳಿಯಿಂದ ತೆಂಗಿನ ಗಿಡ ಹುತ್ತು, ಹುಲ್ಲಿನ ಮೆದೆಗಳಿಗೆ ಹಾನಿಯುಂಟಾಗಿದೆ. ಆದ್ದರಿಂದ ತಾವು ಇದಕ್ಕೆ ಪರಿಹಾರ ಕೊಡುತ್ತೀರಾ? ಮತ್ತು ಕಾಡಾನೆಗಳ ಕಾಟವನ್ನು ತಪ್ಪಿಸಲು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ, ಮತ್ತು ಇದು ವರೆಗೆ ಯಾವ ರೀತಿ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಉಪಾಧ್ಯಕ್ಷರೆ, ನಮ್ಮಲ್ಲಿ ಕಾಡು ಹಂದಿಗಳ ಕಾಟ ಇದೆ. ಪಮ್ಮಲ್ಲೆಲ್ಲಾ ಕಾಡು ಇಲ್ಲದಿರುವುದರಿಂದ ಹಂದಿಗಳೆಲ್ಲಾ 'ನಮ್ಮ ಕಡೆ' ಬಂದು, ರೈತರು ಬೆಳೆದ ಕಬ್ಬು ಬೆಳೆ ನಾಶವಾಗಿ ಅವರ ಬೆಳೆ ಅವರಿಗೆ ಕೈಗೆ ಸಿಗುತ್ತಾ ಇಲ್ಲ. ಕಾಡು ಹಂದಿಗಳು ನಶಿಸಿ ಹೋಗುತ್ತಾ ಇರತಕ್ಕ ವನ್ಯ ಪ್ರಾಣಿಗಳೇನಲ್ಲ. ಅದರ ವ್ಯಾಪ್ತಿಯಲ್ಲಿ ಇದನ್ನು ತಂದುಬಿಟ್ಟಿದ್ದಾರೆ. ಕನಿಷ್ಟ ಇಷ್ಟು ಹಂದಿ ಇರಬೇಕು ಎಂದು ಮಾಡಿ, ಮಿಕ್ಕಿದ್ದಕ್ಕೆಲ್ಲಾ ಏನಾದರೂ ಒಂದು ವ್ಯವಸ್ಥೆ ಮಾಡಿ, ಜನರು ಪೊಡೆದಾದರೂ ಹೊಡೆಯುತ್ತಾರೆ. ನನ್ನ ಕ್ಷೇತ್ರದಲ್ಲಿ ಇರುವುದೇ ೨೦ ಹಳ್ಳಿಗಳಲ್ಲಿ ನೀರಾವರಿ, ಅಲ್ಲಿ ಈ ಹಂದಿಗಳಂ ಬಂದು ಸೇರಿಕೊಂಡು ಬಿಟ್ಟಿವೆ. ಮಾನ್ಯ ನಾಗನಗೌಡರ ಜಮೀನಿನಲ್ಲಿ ಜಾಲಿ ಬೆಳೆದಿದೆ. ಅಲ್ಲೂ ಇವೆ, ನಮ್ಮ ಹೊಳೆ ಪಕ್ಕದಲ್ಲೂ ಬಂದಂ ಸೇರಿಕೊಂಡಿವೆ. ಇದಕ್ಕೂ ತಾವು ಏನಾದರೂ ಮಾಡಬೇಕು. ಆನೆಯದು ಸ್ವಲ್ಪ ವಿಚಾರ ಮಾಡುವಂಥ ವಿಷಯ. ಕಾಡು ಹಂದಿಯದೂ ಏಕೆ ಅದರೊಳಗೆ ಸೇರಿಕೊಂಡಿದೆಯೆಂದು ತಿಳಿಯುವುದಿಲ್ಲ.

ಶ್ರೀ ಪಿ. ರಾಮದೇವ್.—ಊರಿನಲ್ಲಿ ಹಂದಿಗಳು ಇರಬೇಕಂ.

ಶ್ರೀ ಕೆ. ಹೆಚ್. ರಂಗನಾಥ್.—ಊರು ಹಂದಿಗಳು ಜಾಸ್ತಿಯಾಗಿವೆ.

೧–೩೦ ಪಿ. ಎಂ.

ಶ್ರೀ ಎಂ. ಮಹದೇವ್.—ಅಧ್ಯಕ್ಷರೇ, ಇಲ್ಲಿ ಕೆಲವು ಗ್ರಾಮಗಳಲ್ಲಿ ಏನಾಗಿದೆ ಎಂದರೆ,—ನಾಗನಾಪುರ, ಅಂಜೆಪುರ, ದೇವೇಗೌಡನಪುರ, ಹೆಡಿಯಾಲ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಟ್ಟಿದ್ದಂಥ ತೆಂಗಿನ ಫಸಲನ್ನೆಲ್ಲಾ ಆನೆಗಳು ಕಿತ್ತುಹಾಕಿವೆ. ಅದಕ್ಕೆ ಪರಿಹಾರವನ್ನು ಸರ್ಕಾರದವರು ಕೊಟ್ಟಿಲ್ಲ. ಎರಡನೆಯದಾಗಿ, ಹರಿಜನರೇ ಹೆಚ್ಚಾಗಿ ಇರತಕ್ಕಂಥ ಜಾಗದಲ್ಲಿ ಭಾರಿ ಪ್ರಭಾವಶಾಲಿ ವ್ಯಕ್ತಿಗಳು ಹುಲ್ಲಿನ ಮೆದೆಯನ್ನು ಹಾಕಿಕೊಂಡಿದ್ದಾರೆ. ಇದರಿಂದ ಆನೆಗಳು ಹುಲ್ಲಿನ ಮೆದೆಯನ್ನು ತಿನ್ನುವುದಕ್ಕೆ ಅವರ ಮನೆಗಳ ಹತ್ತಿರ ಬರುತ್ತವೆ. ಇದರಿಂದ ಅವರಿಗೆ ಪ್ರಾಣಕ್ಕೇ ಅಪಾಯ ಉಂಟಾಗಿದೆ. ಆದುದರಿಂದ ಮೊದಲು ಅವರ ಹುಲ್ಲಿನ ಮೆದೆಗಳನ್ನು ತೆಗೆಸುವುದಕ್ಕೆ ವ್ಯವಸ್ಥೆ ಮಾಡಬೇಕು. ಇನ್ನು ಆನೆಗಳು ಬಾರದೇ ಇರುವ ಹಾಗೆ ಮಾಡಬೇಕಾಗಿದ್ದರೆ ದೊಡ್ಡ ದೊಡ್ಡ ಕಂದಕಗಳನ್ನು ಬಾರ್ಡರ್‌ನಲ್ಲಿ ತೆಗೆಯಬೇಕು ಇದರಿಂದ ಆನೆಗಳು ಊರಿನೊಳಗೆ ಪ್ರವೇಶ ಮಾಡುವುದನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಆ ಗ್ರಾಮಗಳಿಗೆ ವಿದ್ಯುತ್ ಸೌಕರ್ಯವನ್ನು ಒದಗಿಸಿಕೊಟ್ಟರೆ, ಬೆಳಕಿದ್ದರೆ ಬಹುಶಃ ಆನೆಗಳು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ದಯವಿಟ್ಟು ಈ ಕೆಲಸವನ್ನು ಆದಷ್ಟು ಬೇಗ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎ ಜೀವಿಜಯ.—ಸಭಾಧ್ಯಕ್ಷರೇ, ಆನೆಗಳ ಹಾವಳಿಯಿಂದ ನಷ್ಟ ಉಂಟಾಗಿರತಕ್ಕವರಿಗೆ ಪರಿಹಾರಧನವನ್ನು ಕೊಟ್ಟಿಲ್ಲವೆಂದು ಹೇಳತಕ್ಕದ್ದು ಸರಿಯಲ್ಲ. ಅದಕ್ಕೆ ಬೇಕಾಗಿದ್ದರೆ ತಮಗೆ ಅಂಕಿ ಅಂಶಗಳನ್ನು ಕೂಡ ಕೊಡುತ್ತೇನೆ. ೧೯೮೦–೮೧ರಲ್ಲಿ ಆನೆಗಳ ಹಾವಳಿಯಿಂದ ನಷ್ಟವಾದವರಿಗೆ ೧೧ ಸಾವಿರದ ೨೫೦ ರೂಪಾಯಿಗಳನ್ನು ಕೊಟ್ಟಿದ್ದೇವೆ. ೧೯೮೧–೮೨ರಲ್ಲಿ ೩೪ ಸಾವಿರದ ೩೨೦ ರೂಪಾಯಿಗಳನ್ನು ಕೊಟ್ಟಿದ್ದೇವೆ, ೧೯೮೨–೮೩ರಲ್ಲಿ ೧ ಸಾವಿರದ ೫೭೫ ರೂಪಾಯಿಗಳನ್ನು

ಕೊಟ್ಟಿದ್ದೇವೆ. ಈಗ ಏನಾಗಿದೆ ಎಂದರೆ ಆನೆಗಳು ತಿರುಗಾಡತಕ್ಕ ಜಾಗದಲ್ಲಿ ಎಲ್ಲಾ ಜನರು ಹೋಗಿ ವಾಸ ಮಾಡಿಕೊಂಡಿರುವುದರಿಂದ ಈ ರೀತಿಯ ಪರಿಸ್ಥಿತಿ ಉಂಟಾಗಿದೆ. ಆನೆಗಳಿಗೆ ಅಲ್ಲಿ ಎಲ್ಲಾ ಓಡಾಡಿ ಅಭ್ಯಾಸವಾಗಿ ಹೋಗಿದೆ ಇದೂ ಅಲ್ಲದೆ ಆನೆಗಳು ತಿರುಗಾಡತಕ್ಕ ಪ್ರದೇಶದಲ್ಲಿ ಅತಿಕ್ರಮಣ ಪ್ರವೇಶ ಮಾಡಿರುವುದು ಅಲ್ಲದೆ ಅಲ್ಲಿ ಎಲ್ಲಾ ಕಬ್ಬನ್ನು ಬೆಳೆಯುತ್ತಿದ್ದಾರೆ. ಇದರಿಂದಾಗಿ ಆನೆಗಳಿಗೆ ಓಪನ್ ಇನ್ವಿಟೇಷನ್ ಕೊಟ್ಟ ಹಾಗಾಗಿದೆ. ಆದುದರಿಂದ ನಾವು ಅಲ್ಲಿರತಕ್ಕವರಿಗೆ ಕಬ್ಬನ್ನು ಬೆಳೆಯ ಕೂಡದು ನಿಲ್ಲಿಸಬೇಕೆಂದು ಹೇಳಿರುತ್ತೇವೆ. ಮತ್ತೆ ಆನೆಗಳು ಊರಿನೊಳಗೆ ಬಾರದೇ ಇರುವುದಕ್ಕೋಸ್ಕರವಾಗಿ ೧೯೮೧-೮೨ರಲ್ಲಿ ೧೯.೫ ಕಿಲೋ ಮೀಟರ್ ಕಂದಕವನ್ನು ತೋಡಿದ್ದೇವೆ. ೧೯೮೨-೮೩ರಲ್ಲಿ ೩೫ ಕಿಲೋ ಮೀಟರ್‌ಗಳ ಕಂದಕವನ್ನು ತೋಡುವುದಕ್ಕಾಗಿ ೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡ ಬೇಕೆಂದು ಮಾಡಿದ್ದೇವೆ. ಇನ್ನು ಮಾನ್ಯ ಶ್ರೀ ಮಹದೇವ್ ರವರು ಏನು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ ಅದರಲ್ಲೂ ಆ ಪ್ರದೇಶಗಳಿಗೆ ವಿದ್ಯುತ್ ದೀಪದ ವ್ಯವಸ್ಥೆ ಮಾಡಬೇಕೆಂದು ಕೇಳಿದ್ದಾರೆ, ಅದರ ಬಗ್ಗೆ ಸರ್ಕಾರ ಗಮನದಲ್ಲಿಟ್ಟುಕೊಂಡು ಅವರ ಸಲಹೆಯನ್ನು ಪರಿಶೀಲಿಸುತ್ತದೆ.

ಶ್ರೀ ಕೆ. ಎಚ್. ರಂಗನಾಥ್.—ಕಾಡು ಹಂದಿಯ ಬಗ್ಗೆ ಏನಾದರೂ ವ್ಯವಸ್ಥೆ ಮಾಡಿ, ತಮಾಶೆಗಾಗಿ ನಾನು ಹೇಳುತ್ತಿಲ್ಲ.

ಶ್ರೀ ಎಂ. ಮಹದೇವ್.—೨೫-೩-೮೯ರಂದು ಹೆಡಿಯಾಲ ಗ್ರಾಮದಲ್ಲಿ ಒಬ್ಬ ಬಡವನ ಸುಮಾರು ೪೦ ತೆಂಗಿನ ಸಸಿಗಳನ್ನು ಆನೆಗಳು ಕಿತ್ತುಹಾಕಿವೆ. ಅವನು ಬಹಳ ಬಡವ. ೩-೪ ಮಕ್ಕಳು ಇದ್ದಾರೆ, ಆದುದರಿಂದ ಅವನಿಗೆ ಏನಾದರೂ ಕೂಡಲೇ ಪರಿಹಾರವನ್ನು ಕೊಡುವ ಬಗ್ಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಖಂಡಿತವಾಗಿಯೂ ಪರಿಹಾರವನ್ನು ಕೊಡಿಸುತ್ತೇನೆ.

ವಿಷಯ.—(ii) ಯಂಶವಂತಪುರದ ಬಳಿ ಮಹಿಳೆಯ ಮೇಲೆ ನಡೆಯಿತು ಎನ್ನಲಾದ ಅತ್ಯಾಚಾರದ ಬಗ್ಗೆ.

ಶ್ರೀ ಪಿ. ರಾಮದೇವ್.—ಅಧ್ಯಕ್ಷರೇ, ಇದೇ ತಿಂಗಳು ೨೦ನೇ ತಾರೀಖು ಯಶವಂತಪುರದ ಬಳಿ ಮಹಿಳೆಯ ಮೇಲೆ ನಡೆಯಿತೆನ್ನಲಾದ ಅತ್ಯಾಚಾರದ ಕುರಿತು ಮಾನ್ಯ ಮುಖ್ಯ ಮಂತ್ರಿಗಳವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿಗಜಿಣಗಿ ರಮೇಶ ಚಂದ್ರಪ್ಪ (ಮುಖ್ಯ ಮಂತ್ರಿಗಳವರ ಪರವಾಗಿ).—

ದಿನಾಂಕ ೨೦-೩-೮೯ರಂದು ರಾತ್ರಿ ಸುಮಾರು ೧೦-೩೦ರ ವೇಳೆಯಲ್ಲಿ ಎಲ್. ಸಿ. ಆರ್. ಕಾಲೋನಿಯ ನಿವಾಸಿಯೊಬ್ಬರು ತಮ್ಮ ಪತ್ನಿ, ಮಗ, ಮತ್ತು ಇನ್ನೊಬ್ಬ ವಯಸ್ಸಾದ ಮಹಿಳೆಯೊಂದಿಗೆ ಮತ್ತಿಕೆರೆ ಟೂರಿಂಗ್ ಟಾಕೀಸ್‌ನಲ್ಲಿ ಚಿತ್ರವೊಂದನ್ನು ನೋಡಿ ಹಿಂದಿರುಗಿ ಬರುತ್ತಿದ್ದರೆಂದು ವರದಿಯಾಗಿದೆ ಆಗ ಮೂವರು ವ್ಯಕ್ತಿಗಳು ಅವರ ಮೇಲೆ ಆಕ್ರಮಣ ನಡೆಸಿದರೆಂದು ತಿಳಿದು ಬಂದಿದೆ. ಹಲ್ಲೆಕಾರರು ಆ ವ್ಯಕ್ತಿಗಳ ಮೇಲೆ ಹಲ್ಲೆ ನಡೆಸಿದರೆಂದು ಮತ್ತು ಆ ವ್ಯಕ್ತಿಯ ಪತ್ನಿಯನ್ನು ಸಮೀಪದ ಶಾಲೆಗೆ ಎಳೆದೊಯ್ದು ಆಕೆಯ ಮೇಲೆ ಅತ್ಯಾಚಾರ ನಡೆಸಿದರೆಂದು ವರದಿಯಾಗಿದೆ.

ಆ ವೇಳೆಯಲ್ಲಿ ಆಕೆಯ ಪತಿಯು ಯಶವಂತಪುರ ಪೋಲೀಸ್ ಠಾಣೆಗೆ ಓಡಿ ಹೋಗಿ ಠಾಣೆಯ ಅಧಿಕಾರಿಗೆ, ಬಾಯಿ ಮಾತಿನ ದೂರನ್ನು ನೀಡಿದರು. ಠಾಣೆಯ ಅಧಿಕಾರಿಯು ಕೂಡಲೆ ರಾತ್ರಿ ಗಸ್ತಿನ ಪೋಲೀಸರಿಗೆ ಸುದ್ದಿ ತಿಳಿಸಿದರು. ಗಸ್ತಿನವರು ಕೂಡಲೆ ಸ್ಥಳಕ್ಕೆ ಧಾವಿಸಿದರು. ರಾತ್ರಿ ಸುಮಾರು ೧-೩೦ರ ವೇಳೆಗೆ ಅತ್ಯಾಚಾರಕ್ಕೆ ಒಳಗಾಗಿರುವಳೆಂದು ಹೇಳಲಾದ ಮಹಿಳೆಯನ್ನು ಮತ್ತಿಕೆರೆ ಮುಖ್ಯ ರಸ್ತೆಯಲ್ಲಿರುವ ಗಣೇಶ ದೇವಸ್ಥಾನದ ಬಳಿ ಪೋಲೀಸರು ಕಂಡರು. ಮತ್ತು ಆಪಳನ್ನು ಪೋಲೀಸ್ ಠಾಣೆಗೆ ಕರೆದೊಯ್ದರು. ಗಸ್ತು ತಿರುಗುತ್ತಿರುವ ಪೋಲೀಸರು ಆ ಪ್ರದೇಶದಲ್ಲಿ ಶೋಧನೆ ನಡೆಸಿ ಎಲ್ಲ ಆಪಾದಿತ ವ್ಯಕ್ತಿಗಳನ್ನು ಬಂಧಿಸಿದರು. ಆಪಾದಿತ ವ್ಯಕ್ತಿಗಳನ್ನು ಮತ್ತು ಅತ್ಯಾಚಾರಕ್ಕೆ ಒಳಗಾದ ಮಹಿಳೆಯನ್ನು ಆ ತರುವಾಯ ವೈದ್ಯಕೀಯ ಪರೀಕ್ಷೆಗೆ ಕಳಿಸಿಕೊಡಲಾಯಿತು.